Indian Journal of History and Archaeology

ISSN (E):2582-225X
VOL-2, ISSUE -6, MAR-APRIL, 2021, 13-20

# ದಮನಿತರ ವಿಮೋಚನಾ ಧ್ವನಿಯಾಗಿ ಅಂಬೇಡ್ಕರ್ ಅವರು ಹೊರತಂದ ಪತ್ರಿಕೆಗಳ ಕಾರ್ಯಚರಣೆ: ಒಂದು ಪುನರ್ ಅವಲೋಕನ

**ಲೋಕೇಶನಾಯ್ಕ. ಕೆ**

**ಲೋಕೇಶನಾಯ್ಕ. ಕೆ**
ಸಹಾಯಕ ಪ್ರಾಧ್ಯಾಪಕರು,
ಇತಿಹಾಸ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಭರಮಸಾಗರ.

ಜಗತ್ತಿನಲ್ಲಿ ಭಾರತಕ್ಕೆ ಸಾಮಾಜಿಕ ಮತ್ತು ಸಾಂಸ್ಕೃತಿಕ ಪರಂಪರೆಯಲ್ಲಿ ಒಂದು ಸ್ಥಾನ ಮತ್ತು ಹೆಸರಿದೆ. ಆದರೂ ಭಾರತದಲ್ಲಿ ಜಾತಿ ಮತ್ತು ಧರ್ಮಗಳಂಥ ವಿಲಕ್ಷಣ ಸಾಮಾಜಿಕ ಸಂಸ್ಥೆಗಳು ಸಾಮಾಜಿಕ ಸುಧಾರಣಾ ಆಂದೋಲನಗಳಲ್ಲಿ ಪತ್ರಿಕೆಗಳ ಪಾತ್ರವು ವೈಯಕ್ತಿಕ ಸುಧಾರಕರ ನಿರ್ದಿಷ್ಟ ಕಾಳಜಿಗಳ ಅಭಿವ್ಯಕ್ತಿಗೆ ಸೀಮಿತವಾಗಿರಲಿಲ್ಲ. ಏಕೆಂದರೆ, ಪ್ರತಿಯೊಬ್ಬ ಸಮಾಜ ಸುಧಾರಕರು ಕೂಡ ಪ್ರಜಾಪ್ರಭುತ್ವದ ತತ್ತ್ವಗಳು ಮತ್ತು ಮೌಲ್ಯಗಳ ಆಕಾಂಕ್ಷೆಯ ಮೇಲಿನ ಸಾಮೂಹಿಕ ಚಿಂತನ ಮಂಥನಕ್ಕೆ ಅಡಿಪಾಯವನ್ನು ನಿರ್ಮಿಸಿದರು. ಅಂಥ ವೈಚಾರಿಕ ಪ್ರಜ್ಞೆಯ ಹಿನ್ನೆಲೆಯಲ್ಲಿ ಕಂಡು ಬಂದಿರುವಂಥ ದೈತ್ಯ ಪ್ರತಿಭೆ, ಧೀಮಂತ ವ್ಯಕ್ತಿತ್ವ ಮತ್ತು ವಿಶ್ವದ ಜ್ಞಾನಸಾಗರವೇ ಬಾಬಾಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್. ಹೀಗೆ ಬಹುಮುಖಿ ವ್ಯಕ್ತಿತ್ವವನ್ನು ಹೊಂದಿರುವ ಅಂಬೇಡ್ಕರ್ ಅವರನ್ನು ಭಾರತೀಯ ಸಂದರ್ಭದಲ್ಲಿ **ಸಂವಿಧಾನ ಶಿಲ್ಪಿ**ಯಾಗಿ, ದಮನಿತ ವರ್ಗಗಳ ವಿಮೋಚನಾ ಧ್ವನಿಯಾಗಿ, ಅವರ ನೇತಾರರಾಗಿಯೇ ಕಂಡವರೇ ಹೆಚ್ಚು. ಅದು ಭಾರತೀಯ ಸಮಾಜದಲ್ಲಿ ಸಹಜವೇ ಆಗಿದೆ. ಆದರೆ, ಅಂಬೇಡ್ಕರ್ ಅವರ ಸಮಷ್ಠಿ ವ್ಯಕ್ತಿತ್ವದ ಬಹುಮುಖ್ಯ ಭಾಗದಲ್ಲಿ ಪತ್ರಿಕಾ ವೃತ್ತಿಯೂ ಕೂಡ ಇತ್ತು ಎಂಬುದು ಗಮನಾರ್ಹವಾಗಿದೆ.

ಅಂಬೇಡ್ಕರ್ ಅವರು ತಾವು ಹುಟ್ಟಿ ಬಂದಿರುವಂಥ ಮಹಾರಾಷ್ಟ್ರ ರಾಜ್ಯದಲ್ಲಿನ ಮಹಾರ್ ಅಸ್ಪೃಶ್ಯ ಸಮಾಜವನ್ನು ಪ್ರಧಾನವಾಗಿ ಶಿಕ್ಷಣ ಮತ್ತು ಅನೇಕ ಅವಕಾಶಗಳು, ಸೌಲಭ್ಯಗಳಿಂದ ಜಾತಿ ಹಿಂದೂ ವ್ಯವಸ್ಥೆಯೂ ಧರ್ಮ ಮತ್ತು ದೇವರ ಹೆಸರಿನಲ್ಲಿ ವಂಚಿತರನ್ನಾಗಿ ಮಾಡಿತ್ತು. ಈ ಕಾಲಮಾನದಲ್ಲಿ

ಅಂಬೇಡ್ಕರ್ ಅವರು ಸ್ವತಃ ತಾವು ಅನುಭವಿಸಿರುವ ನೋವು, ಅವಮಾನ, ನಿಂಧನೆಯೂ ಮುಂದಿನ ಮಾನವ ಪೀಳಿಗೆಯ ಮೇಲೆ ಪ್ರಭಾವ ಬೀಳಬಾರದೆಂಬ ಅಭಿಲಾಷೆಯನ್ನು ಹೊಂದಿದವರು. ಆದ್ದರಿಂಲೇ ಅಂಬೇಡ್ಕರ್ ಅವರು ತಮ್ಮ ದೂರದೃಷ್ಟಿತ್ವದ ಆಲೋಚನೆಗಳು ಹರಿತವಾದ ಅನೇಕ ಪತ್ರಿಕಾ ಲೇಖನಗಳನ್ನು ಬರೆದವರು. ಆ ಮೂಲಕ ಸರ್ವಜನಾಂಗದ ಸ್ವಾತಂತ್ರ್ಯ, ಸಮಾನತೆ ಮತ್ತು ಸೋದರತೆಯ ತೋಟಕ್ಕೆ ನೀರೆರೆದು ಪೋಷಿಸಿ, ಮುಂದಿನ ಪೀಳಿಗೆಗಳು ಶಾಶ್ವತವಾಗಿ ನೆನಪಿಸುವ ಕಾರ್ಯಸಾಧನೆಯನ್ನು ಮಾಡಿದ್ದಾರೆ. ಆದರೆ, ವಿದೇಶಿ ಮೂಲದ ಜಾತಿ ಹಿಂದೂ ನೇತಾರರು ಮತ್ತು ಅವರು ಹೊರಡಿಸುತ್ತಿದ್ದಂಥ ಪತ್ರಿಕೆಗಳು ಮಾತ್ರ ಅಂಬೇಡ್ಕರ್ ಅವರ ವಿಮೋಚನಾ ಲೇಖನಗಳು ಮತ್ತು ಸಂಶೋಧನಾ ಬರಹಗಳನ್ನು ಪ್ರಕಟಿಸಿರುವುದಿಲ್ಲ. ಈ ಪತ್ರಿಕಾ ರಂಗದಲ್ಲಿಯೂ ಕೂಡ ಜಾತಿಹಿಂದೂಗಳು ಮಡಿವಂತಿಕೆಯನ್ನು ಪ್ರದರ್ಶಿಸಿದ್ದರು. ಇದಕ್ಕೊಂದು ಹಿಂಬುಕೊಡುವಂತೆ; ಅಂದಿನ ರಾಷ್ಟ್ರೀಯ ನಾಯಕ ಬಾಲಗಂಗಾಧರನಾಥ ತಿಲಕ್ ಅವರ ಸಂಪಾದಕತ್ವದಲ್ಲಿ ಹೊರ ಬರುತ್ತಿದ್ದ ಕೇಸರಿ ಪತ್ರಿಕೆಯಲ್ಲಿ ಅಂಬೇಡ್ಕರ್ ಅವರ ವಿಮೋಚನಾ ಮಾರ್ಗದ ಲೇಖನಗಳು ಮತ್ತು ಅವರು ಹೊರತರಲು ಹೊರಟ್ಟಿದ್ದ ಮೂಕನಾಯಕ ಪತ್ರಿಕೆ ಜಾಹಿರಾತನ್ನು ಪ್ರಕಟಿಸಲು ನಿರಾಕರಿಸಿರುವುದು ಅಂಬೇಡ್ಕರ್ ಅವರಿಗೆ ಬೇಸರವನ್ನು ತಂದಿತ್ತು. ಅದನ್ನು ಸೂಕ್ಷ್ಮಗ್ರಹಿಯಾಗಿ ಅರಿತಂಥ ಅಂಬೇಡ್ಕರ್ ಅವರು ಸ್ವತಃ ತಾವೇ ಪತ್ರಿಕೆಗಳನ್ನು ಹೊರ ತರಲು ಯೋಚಿಸಿ ಆರಂಭಿಸಿದರು. ಆ ಪತ್ರಿಕೆಗಳು ಭಾರತೀಯ ಸಮಾಜದಲ್ಲಿ ದಮನಕ್ಕೆ ಒಳಗಾಗಿದ್ದ ಜನಸಮುದಾಯಗಳನ್ನು ಮೂಲಸೆಲೆಯ ಶಿಕ್ಷಣ, ಸಂಘಟನೆ, ಪ್ರತಿಭಟನೆ (ಹೋರಾಟ)ಗಳೆಂಬ ತ್ರಿಮೂರ್ತವಾದದ ಮೂಲಕ ಮುಖ್ಯವಾಹಿನಿಗೆ ಕರೆ ತರಲು ಪ್ರಯತ್ನಿಸಿದರು. ಅಂಬೇಡ್ಕರ್ ಅವರ ಪ್ರಧಾನ ಚಿಂತನಾ ಲಹರಿಯೂ ಸಮಾಜದಲ್ಲಿರುವ ವಿವಿಧ ಸ್ತರಗಳಲ್ಲಿ ಜನವರ್ಗಗಳನ್ನು ವಿಮೋಚನೆಯತ್ತ ಕರೆ ತರುವಲ್ಲಿ ಇಳಿಯುವಲ್ಲಿ ಅವರು ಹೊರ ತಂದಿರುವ ಐದು ಪತ್ರಿಕೆಗಳ ಪಾತ್ರವೂ ಹೆಚ್ಚು ಮಹತ್ವದ್ದೇ ಆಗಿದ್ದವು.

ಭಾರತೀಯ ಮೂಲನಿವಾಸಿ ದಮನಿತ ವರ್ಗದವರನ್ನು ಜನಜಾಗೃತರನ್ನಾಗಿ ಮಾಡಲು, ಜಾತಿಹಿಂದೂ ಸಾಮಾಜಿಕ ಕಳಂಕದಿಂದ ಬಿಡುಗಡೆಗೊಳಸಲು, ಪ್ರತ್ಯೇಕ ಮತದಾನದ ವ್ಯವಸ್ಥೆಯಿಂದ ರಾಜಕೀಯವಾಗಿ ಒಂದು ಸುಸ್ಥಿರವಾದ ಸ್ಥಾನವನ್ನು ಕಲ್ಪಿಸುವುದು. ನಿಮ್ನವರ್ಗದವರನ್ನು ಮುಖ್ಯವಾಹಿನಿಗೆ ತರಲು, ಆರ್ಥಿಕವಾಗಿ ಸಶಕ್ತರನ್ನಾಗಿ ಮಾಡಲು, ಶಿಕ್ಷಣದ ಪ್ರಸಾರ ಮಾಡಲು, ಮೂಲನಿವಾಸಿಗಳ ಸಂಸ್ಕೃತಿಯ ಬಗೆಗೆ ಎಚ್ಚರಿಸುವುದು. ಹೀಗೆ, ಸದಾ ಎಚ್ಚರದಿಂದ ಇರುವ ಮೂಲಕ ಬರುವ ಹಲವು ಹತ್ತು ಸವಾಲುಗಳಿಗೆ ಮತ್ತು ಸಮಸ್ಯೆಗಳನ್ನು ಪರಿಹರಿಸಲು ಸ್ಪಂದಿಸುವ ಧ್ಯೇಯೋದ್ದೇಶದಿಂದಲೇ ಅಂಬೇಡ್ಕರ್ ಅವರು ಪ್ರಧಾನವಾಗಿ ವಿವಿಧ ಕಾಲಘಟ್ಟದಲ್ಲಿ ಐದು ಪತ್ರಿಕೆಗಳನ್ನು ಪ್ರಾರಂಭಿಸಿದರು. ಅಂಬೇಡ್ಕರ್ ಅವರು

ಆರಂಭಿಸಿದ ಪತ್ರಕರ್ತ ವೃತ್ತಿಯೂ 1920ರಿಂದ ಮೊದಲ್ಗೊಂಡು 1956ರವರೆಗೂ ಬಿಡುವಿಲ್ಲದಯೇ ಮುಂದುವರೆದಿರುತ್ತದೆ.

ಒಂದು ಪ್ರಾಂತ್ಯ ಅಥವಾ ದೇಶವನ್ನು ಆಳುವ ದೊರೆ ಅಥವಾ ಮಹಾರಾಜನಿಗೆ ಕೀರಿಟ ಎಷ್ಟು ಮುಖ್ಯವೋ, ಒಬ್ಬ ನಾಯಕನಿಗೆ ಪತ್ರಿಕೆಯೂ ಕೂಡ ಅಷ್ಟೇ ಮುಖ್ಯವಾಗಿರುತ್ತದೆ. ಇದನ್ನು ವಿದ್ಯಾರ್ಥಿದೆಸೆಯಿಂದಲೇ ವಿದೇಶ ಮತ್ತು ಭಾರತದ ಜನನಾಯಕ ಮುಖವಾಣಿಗಳನ್ನು ಗ್ರಹಿಸಿದ್ದರು. ಆದ್ದರಿಂದಲೇ ಅಂಬೇಡ್ಕರ್ ಅವರು ತಮ್ಮ ಬದುಕಿನ ಕಾಲಮಾನದಲ್ಲಿ ಐದು ಜನಮೆಚ್ಚಿಗೆಯ ಪತ್ರಿಕೆಗಳನ್ನು ಹೊರತಂದಿರುವುದನ್ನು ಪ್ರಸ್ತುತ ಅಧ್ಯಯನದಲ್ಲಿ ತಳಸ್ಪರ್ಶಿಯಾಗಿ ಗುರುತು ಮಾಡಲಾಗಿದೆ. ಅವುಗಳೆಂದರೆ; **ಮೂಕನಾಯಕ, ಬಹಿಷ್ಕೃತ ಭಾರತ, ಜನತಾ, ಸಮತಾ** ಮತ್ತು ಅಂಬೇಡ್ಕರ್ ಅವರ ಜೀವಿತದ ಕೊನೆಯ ಭಾಗದಲ್ಲಿ **ಪ್ರಬುದ್ಧ ಭಾರತ** ಎಂಬ ಪತ್ರಿಕೆಗಳನ್ನು ಹೊರಡಿಸಿರುವುದು ಇಂದು ಪತ್ರಿಕಾ ರಂಗದಲ್ಲಿ ಒಂದು ಚರಿತ್ರೆಯ ಭಾಗವೇ ಆಗಿದೆ.

ಅಂಬೇಡ್ಕರ್ ಅವರ ಮೊದಲ ಪತ್ರಿಕೆ **ಮೂಕನಾಯಕ**. ಇದರ ಹೆಸರೇ ಸೂಚಿಸುವಂತೆ ಮಾತು ಬಾರದೆ ಮೂಖವಾಗಿರುವ ಜನವರ್ಗಕ್ಕೆ ನಾಯಕನಾಗಿದ್ದೇನೆ ಎಂಬ ಕಾರಣಕ್ಕೆ ಅಂಬೇಡ್ಕರ್ ಅವರು ಈ ಹೆಸರನ್ನು ತಮ್ಮ ಪ್ರಥಮ ಪತ್ರಿಕೆಗೆ ಇಟ್ಟರು. ಅಂದರೆ, ಭಾರತೀಯ ಅಸಮಾನ ಸಮಾಜವು ಒಂದು ವರ್ಗವನ್ನು ಜಾತಿಯ ಕಾರಣಕ್ಕೆ ವ್ಯವಸ್ಥೆಯೊಂದಲೇ ದೂರವಿಟ್ಟು ಮೂಖ ಸಮಾಜವಾಗಿಯೇ ಮಾಡಿತ್ತು. ಆ ಸಮಾಜವೇ ನಿಮ್ನವರ್ಗವಾಗಿದೆ. ನಿಮ್ನವರ್ಗಕ್ಕೆ ಮಾತು ಬರಿಸುವುದೇ ಅಂಬೇಡ್ಕರ್ ಅವರು ಹೊರ ತಂದಿರುವ ಮೂಕನಾಯಕ ಪತ್ರಿಕೆಯ ಮೊದಲನೆಯ ಆದ್ಯತೆಯೇ ಆಗಿತ್ತು. ಈ ಪತ್ರಿಕೆಯೂ 1920ನೇ ಜನವರಿ 31 ರಂದು ಪ್ರಥಮ ಸಂಚಿಕೆ ಹೊರ ಬಂದು, ಅಂಬೇಡ್ಕರ್ ಅವರು ಮತ್ತೇ ವಿದೇಶಿ ಶಿಕ್ಷಣಕ್ಕೆ ತೆರಳುವ ತನಕ ಪ್ರಕಟಿತಗೊಂಡಿರುತ್ತದೆ. ಅಂಬೇಡ್ಕರ್ ಅವರ ಕೊನೆಯ ಪತ್ರಿಕೆಯಾದ **ಪ್ರಬುದ್ಧ ಭಾರತವು** 1956ನೇ ಫೆಬ್ರವರಿ 4 ರಂದು ಪ್ರಾರಂಭಗೊಂಡಿರುವುದನ್ನು ಗುರುತಿಸಬಹುದು.

ಅಂಬೇಡ್ಕರ್ ಅವರು ಮೂಕನಾಯಕ ಪತ್ರಿಕೆಯನ್ನು ಹೊರತರಲು ಕೊಲ್ಲಾಪುರ ರಾಜಸಂಸ್ಥಾನದ ಛತ್ರಪತಿ ಶಾಹುಮಹಾರಾಜ ಅವರಿಂದ 2500 ರೂಪಾಯಿಗಳನ್ನು ಸಹಾಯ ಧನವಾಗಿ ಪಡೆದಿರುತ್ತಾರೆ. ಮೂಕನಾಯಕ ಪತ್ರಿಕೆಯ ಒಂದು ಪ್ರತಿಯ ಮುಖ ಬೆಲೆ 2.5 ಆಣೆ ಆಗಿತ್ತು. ಈ ಪತ್ರಿಕೆಯ ವಾರ್ಷಿಕ ಚಂದಾದಾರಿಕೆಯಾಗಿ ಓದುಗರಿಂದ 2.50 ರೂಪಾಯಿಗಳನ್ನು ಪಡೆಯಲಾಗುತ್ತಿತ್ತು. 1920ನೇ ಜುಲೈ ತಿಂಗಳಿನಲ್ಲಿ ಪತ್ರಿಕೆಯ ಪ್ರಸರಣವು ಮಟ್ಟವು 700 ಚಂದಾದಾರರನ್ನು ಹೊಂದಿತ್ತು. ಮುಂದುವರೆದಂತೆ, 1922ರ ಹೊತ್ತಿಗೆ ಅಂದರೆ, ಪತ್ರಿಕೆ ಆರಂಭಗೊಂಡ ಎರಡೇ ವರ್ಷದಲ್ಲಿ 1000 ಚಂದದಾರರಿಗೆ ತಲುಪಿತು ಎಂಬುದು ಹೆಮ್ಮೆಯ ಸಂಗತಿಯೇ ಆಗಿದೆ. ಏಕೆಂದರೆ, ಈ ಮೂಕನಾಯಕ ಪತ್ರಿಕೆಯ ಆರಂಭದ ಬಗೆಗೆ

ಜಾಹಿರಾತನ್ನು ನೀಡದೇ ಬಂದಂಥ ಪತ್ರಿಕೆ 1000 ಹಣ ನೀಡಿ ಓದುಗರನ್ನು ಹೊಂದಿದೆ ಎಂದರೆ, ಅದರಲ್ಲಿ ಪ್ರಕಟವಾಗುತ್ತಿದ್ದ ವಿಷಯಗಳು ಮತ್ತು ಚಿಂತನಾ ಲಹರಿಯೂ ಜನಮೆಚ್ಚುಗೆಗೆ ಭಾಜನವಾಗಿರುತ್ತದೆ ಎಂದೇ ಹೇಳಬಹುದು.

ಅಂಬೇಡ್ಕರ್ ಅವರು ತಮ್ಮ ಜೀವಿತದ ಅವಧಿಯಲ್ಲಿ ರೂಪಿಸಿದ್ದಂಥ ಜನಪರವಾದ ಸಾಮಾಜಿಕ, ಸಾಂಸ್ಕೃತಿಕ, ಶೈಕ್ಷಣೀಕ, ರಾಜಕೀಯ ಹಾಗೂ ಧಾರ್ಮಿಕ ಆಂದೋಲನಗಳ ಬಲವರ್ಧನೆಗಾಗಿ ಆರಂಭಿಸಿದ್ದ ಪತ್ರಿಕೆಗಳೇ ಆಗಿದ್ದವು. ಮೂಕನಾಯಕ ಪತ್ರಿಕೆಯಲ್ಲಿ ಅಂಬೇಡ್ಕರ್ ಅವರು ಪ್ರತ್ಯಕ್ಷವಾಗಿ ಕಾಣಿಸಿಕೊಳ್ಳದಿದ್ದರೂ ಅದರ ಹಿಂದಿನ ಪ್ರೇರಕಾ ಶಕ್ತಿ ಅವರೇ ಆಗಿದ್ದರು. ಈಗಾಗಲೇ ಪ್ರಸ್ತಾಪಿಸಿರುವಂತೆ, ಮೂಕನಾಯಕ ಎಂಬ ಪದವೇ ಧ್ವನಿಯಿಲ್ಲದ ಜನವರ್ಗಗಳ ಅಂತರಂಗದ ಒತ್ತಾಸೆಗಳ ಮಹಾಪ್ರತಿಮೆಯಂತೆ ಇತ್ತು. ರಾಜಕೀಯ ವಲಯದಲ್ಲಿ ನಿಮ್ನವರ್ಗದವರ ಮುಖವಾಣಿಯಾಗಿ ಪ್ರಮುಖ ಪಾತ್ರವಹಿಸಿದ **ಮೂಕನಾಯಕ** ಪತ್ರಿಕೆಯೂ ಭಾರತದಲ್ಲಿ ಅಸಮಾನ ಸಮಾಜದ ರೋಗಗ್ರಸ್ಥ ಮನಸ್ಸಿನಿಂದ ರೂಪಿತವಾಗಿರುವಂಥ ಜಾತಿಪದ್ಧತಿಯ ಅರ್ಥಹೀನತೆಯಿಂದ ಎಲ್ಲಾ ಜನವರ್ಗಗಳಲ್ಲಿನ ಮಹಿಳೆಯರು ಹಾಗೂ ಮೂಲನಿವಾಸಿ ಅಸ್ಪೃಶ್ಯರನ್ನು ವ್ಯವಸ್ಥೆಯ ಮುಖ್ಯವಾಹಿನಿಗೆ ತರುವ ಅವಶ್ಯಕತೆಗಳ ಬಗೆಗೆ ತಾನು ಪ್ರಕಟಗೊಂಡ ಕಾಲದುದ್ದಕ್ಕೂ ಗಟ್ಟಿ ದನಿಯನ್ನು ಎತ್ತುತ್ತಲೇ ಬಂದಿತ್ತು. ಆ ಮುಖೇನ ಅಂಬೇಡ್ಕರ್ ಅವರು ಮಾನವ, ಮಾನವರನ್ನು ಪ್ರಾಣಿಗಳಿಗಿಂತ ಕೀಳಾಗಿ ಕಾಣುತ್ತಿದ್ದ ಅಂದಿನ ಕಲುಷಿತ ಅಸಮಾನ ಸಮಾಜದ ವಿರುದ್ಧ ಪತ್ರಿಕೆಗಳ ಮೂಲಕ ಗುಡುಗಿದರು.

ಅಂಬೇಡ್ಕರ್ ಅವರು ಲಂಡನ್‌ನ ಅರ್ಥಶಾಸ್ತ್ರ ಶಾಲೆಯಲ್ಲಿ ಅಧ್ಯಯನ ಮಾಡುತ್ತಿರುವಾಗ ಮಂಡಿಸಿದ **ಭಾರತದಲ್ಲಿ ಜವಾಬ್ದಾರಿಯುತ ಸರ್ಕಾರದ ಜವಾಬ್ದಾರಿಗಳು** ಎಂಬ ಶೀರ್ಷಿಕೆಯ ಚಿಂತನಾಶೀಲ ಪ್ರಬಂಧದ ಬಗೆಗೆ ಬ್ರಿಟಿಷ್ ಪ್ರಖ್ಯಾತ ಅರ್ಥಶಾಸ್ತ್ರಜ್ಞ ಮತ್ತು ಪ್ರಾಧ್ಯಾಪಕರಾಗಿದ್ದಂಥ **ಎಡ್ವಿನ್ ಕ್ಯಾನನ್** ಅವರು **ಈ ಪತ್ರಿಕೆಯಲ್ಲಿನ ಕೆಲವು ಅಭಿಪ್ರಾಯಗಳು ಕ್ರಾಂತಿಕಾರಿ ಸ್ವರೂಪವನ್ನು ಹೊಂದಿವೆ ಇವುಗಳನ್ನು ಸರಿಪಡಿಸಬೇಕು** ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದರು. ಅಂದರೆ, ಅಂಬೇಡ್ಕರ್ ಅವರು ಬ್ರಿಟಿಷ ನೆಲದಲ್ಲಿದ್ದರು ಕೂಡ ಬ್ರಿಟಿಷ್ ಪ್ರಭುತ್ವದ ಕೆಲವು ಧೋರಣೆಗಳನ್ನು ಪ್ರಖರವಾಗಿಯೇ ದಾಖಲಿಸಿರುವುದು ತಿಳಿದು ಬರುತ್ತದೆ. ಈ ಮೂಲಕವಾಗಿಯೇ ಅಂಬೇಡ್ಕರ್ ಅವರು ಬ್ರಿಟಿಷರ ಕೈಗೊಂಬೆ ಮತ್ತು ಅವರಿಗೆ ಮಾಹಿತಿದಾರರಾಗಿದ್ದರು ಎಂಬ ಜಾತಿಹಿಂದೂಗಳು ಸರಿಯಾಗಿಯೇ ಇದನ್ನು ಗ್ರಹಿಸಬೇಕು. ಹಾಗೆಯೇ, ಇಂಥ ಅನೇಕ ಸಂದರ್ಭ ಹಾಗೂ ಅವಕಾಶಗಳು ಸಿಕ್ಕಾಗ ಅಂಬೇಡ್ಕರ್ ಅವರು ರಾಷ್ಟ್ರ ಮತ್ತು ರಾಷ್ಟ್ರಪ್ರೇಮವನ್ನು ಎತ್ತಿಹಿಡಿದ್ದಾರೆ ಎಂಬುದನ್ನು ಈ ನೆಲೆಯಲ್ಲಿ ತಿಳಿದುಬರುತ್ತದೆ.

ಅಂಬೇಡ್ಕರ್ ಅವರು ವಿದೇಶಿ ಶಿಕ್ಷಣವನ್ನು ಪೂರ್ಣಗೊಳಿಸಿ ಭಾರತಕ್ಕೆ ಬಂದು ಯಾವುದೇ ಸರ್ಕಾರಿ ಹುದ್ದೆಯನ್ನು ಹಿಡಿಯದೇ ಈ ನೆಲದ ಮೂಲನಿವಾಸಿ ನಿಮ್ನವರ್ಗದವರ ದಮನಿತ ಬದುಕಿಗೆ ಆಶಾಕಿರಣವನ್ನು ತರಲು ಬದುಕನ್ನೇ ಮುಡುಪಾಗಿ ಇಟ್ಟವರು. ಅಂದರೆ, ಸಾರ್ವಜನಿಕ ಬದುಕಿಗೆ ಪಾದಾರ್ಪಣೆಮಾಡಿ, ಮುಂಬೈ ಉಚ್ಚ ನ್ಯಾಯಾಲಯದಲ್ಲಿ ವಕೀಲ ವೃತ್ತಿಯನ್ನು ಆರಂಭಿಸಿ, ದಮನಿತರಿಗೆ ಕಾನೂನಿನ ರಕ್ಷಣೆಯನ್ನು ದೊರಕಿಸಿಕೊಡಲು ದುಡಿದವರು. ಹಾಗೆಯೇ, ದಮನಿತರಿಗೆ ಸಾಮಾಜಿಕ ನ್ಯಾಯವನ್ನು ಎರಡು ಬಲಿಷ್ಠ ವ್ಯವಸ್ಥೆಗಳಿಂದ ಕೊಡಿಸಲು ಪ್ರಜಾಸತ್ತಾತ್ಮಕವಾಗಿಯೇ ಹೋರಾಟವನ್ನು ರೂಪಿಸಿ ಅದರಲ್ಲಿ ಯಶಸ್ಸನ್ನು ಕಂಡರು. ಅದರ ಭಾಗವಾಗಿಯೇ ಅಂಬೇಡ್ಕರ್ ಅವರು ಬ್ರಿಟಿಷ್ ಪ್ರಭುತ್ವ ಮತ್ತು ಭಾರತದ ಜಾತಿಹಿಂದೂಗಳಿಗೆ ಸಂಘಟನಾತ್ಮಕ ಶಕ್ತಿಯನ್ನು ತೋರಿಸಿಕೊಡಲು **ಬಹಿಷ್ಕೃತ ಹಿತಕಾರಿಣಿ** ಎಂಬ ಒಂದು ಬಲಿಷ್ಠ ಸಂಘಟನೆ ಮತ್ತು ಜನರಲ್ಲಿ ಜಾಗೃತಿಯನ್ನು ಮೂಡಿಸಲು **ಬಹಿಷ್ಕೃತ ಭಾರತ್** ಎಂಬ ಮುಖವಾಣಿಯ ಪತ್ರಿಕೆಯನ್ನು 1927ನೇ ಏಪ್ರಿಲ್ 3 ರಂದು ಹೊರತಂದರು. ಈ ಸಂದರ್ಭವೂ ವೈದಿಕ ಧರ್ಮಕ್ಕೆ ಅಂಬೇಡ್ಕರ್ ಅವರ ನಿರ್ಣಾಯಕ ಸವಾಲೇ ಆಗಿತ್ತು. ಅಂಬೇಡ್ಕರ್ ಅವರು ವೈದಿಕ ಸಮಾಜವನ್ನು ತೀವ್ರವಾಗಿ ಟೀಕಿಸಿ, ಈ ಪತ್ರಿಕೆಯ ಸಂಪಾದಕೀಯದಲ್ಲಿ ಬ್ರಿಟಿಷ್ ಆಡಳಿತ ಮತ್ತು ವೈದಿಕರ ಪ್ರಾಬಲ್ಯವನ್ನು ಹೀಗೆ ಹೋಲಿಸುತ್ತಾರೆ. ಅದೇನೆಂದರೆ; **ನನ್ನ ದೃಷ್ಟಿಯಲ್ಲಿ, ಬ್ರಿಟಿಷ್ ಆಡಳಿತ ಮತ್ತು ವೈದಿಕ ಆಡಳಿತವು ಹಿಂದೂ ಜನರ ದೇಹಗಳಿಗೆ ಅಂಟಿಕೊಂಡಿರುವ ಎರಡು ಜಿಗಣೆಗಳಂತಿದೆ ಮತ್ತು ಅವು ಭಾರತೀಯ ಜನರ ರಕ್ತವನ್ನು ನಿರಂತರವಾಗಿ ಹೀರುತ್ತಿವೆ. ಬ್ರಿಟಿಷ್ ಆಡಳಿತವು ಜನರ ದೇಹಗಳನ್ನು ಗುಲಾಮರನ್ನಾಗಿ ಮಾಡಿದ್ದರೆ, ವೈದಿಕ ಆಡಳಿತವು ಅವರ ಆತ್ಮವನ್ನು (ಮನಸ್ಸನ್ನು) ಗುಲಾಮರನ್ನಾಗಿ ಮಾಡಿದೆ. ಬ್ರಿಟಿಷ್ ಆಡಳಿತವು ಭಾರತದ ಸಂಪತ್ತನ್ನು ದುರುಪಯೋಗಪಡಿಸಿಕೊಂಡರೆ, ವೈದಿಕ ಆಡಳಿತವು ಸ್ವಾಭಿಮಾನದ ಮಾನಸಿಕ ಸಂಪತ್ತನ್ನು ಕಸಿದುಕೊಂಡಿದೆ**. ಮಹಾಡ್ ನಗರದಲ್ಲಿದ್ದಂಥ ಚೌಡರ್ ಕೆರೆಯ ನೀರನ್ನು ಕುಡಿಯುವ ಸತ್ಯಾಗ್ರಹದ ಬೆನ್ನಿಗೇ ಈ ಪತ್ರಿಕೆ ಆರಂಭವಾದ್ದರಿಂದ ಅದರ ಮೊದಲ ಮೂರು ಸಂಪಾದಕೀಯಗಳು ಪ್ರತಿಭಟನೆಯ ಕುರಿತಾಗಿಯೇ ಇದ್ದವು. ಸಾರ್ವಜನಿಕ ಕೆರೆಗಳನ್ನು ಅಸ್ಪೃಶ್ಯರ ಬಳಕೆಗೂ ಮುಕ್ತವಾಗಿ ದೊರೆಯಬೇಕೆಂಬ ಹಕ್ಕೊತ್ತಾಯದ ಅನಂತರ ಜಾತಿಹಿಂದೂಗಳು, ಬ್ರಿಟಿಷ್ ಸರ್ಕಾರ ಹಾಗೂ ಅಸ್ಪೃಶ್ಯರ ಜವಾಬ್ದಾರಿ ಏನು ಎಂಬುದನ್ನೇ ಸಂಪಾದಕೀಯಗಳು ಪ್ರಮುಖವಾಗಿ ಚರ್ಚಿಸಿದ್ದವು. ಅಂಬೇಡ್ಕರ್ ಅವರ ಬಹಿಷ್ಕೃತ್ ಭಾರತವು ಆರ್ಥಿಕ ಸಂಕಷ್ಟವನ್ನು ಎದುರಿಸುತ್ತಿರುವ ಸಂದರ್ಭದಲ್ಲಿ ಯಾರೂ ಸಹಾಯ ಮಾಡಲು ಮುಂದೆ ಬರಲಿಲ್ಲ. ಅಂಬೇಡ್ಕರ್ ಅವರ ಕೊನೆಯ ಸಂಪಾದಕೀಯನ್ನು **ಪುಣೆಯ ಶಿವಪಾರ್ವತಿ ದೇವಾಲಯ ಪ್ರವೇಶ ಸತ್ಯಾಗ್ರಹವು 1929ನೇ** ನವೆಂಬರ್ 15 ರಂದು ಪತ್ರಿಕೆಯಲ್ಲಿ ಪ್ರಕಟವಾಯಿತು. ಸ್ವರಾಜ್‌ಗಾಗಿ ಕಾಂಗ್ರೆಸ್‌ನ ಬೇಡಿಕೆಯ ಮೇಲೆ ಬಹಿಷ್ಕಾರದ ನಿಲುವಿನ ಬಗೆಗೆ ಅಂಬೇಡ್ಕರ್ ಅವರ ಬರವಣಿಗೆ ಹೀಗಿದೆ; **ನಮ್ಮ**

**ಹಕ್ಕುಗಳನ್ನು ನಮಗೆ ನೀಡಿ, ಆಗ ಮಾತ್ರ ನಾವು ಸ್ವರಾಜ್ ಬೇಡಿಕೆಯನ್ನು ಬೆಂಬಲಿಸುತ್ತೇವೆ. ಮುಸ್ಲಿಮರು ಈ ನೀತಿಯನ್ನು ಅನುಸರಿಸುತ್ತಿರುವಾಗ, ಅಸ್ಪೃಶ್ಯರು ಏಕೆ? ನಮ್ಮ ದೃಷ್ಟಿಯಲ್ಲಿ ನಾವು ಸ್ವರಾಜ್ ಪಡೆಯುವವರೆಗೂ ಕಾಯಿರಿ' ಎಂದು ಹೇಳುವ ವ್ಯಕ್ತಿಯು ನಿಷ್ಕಪಟ ಅಥವಾ ಸ್ವಾರ್ಥಿಯಾಗಿರಬೇಕು ಮತ್ತು ಇದನ್ನು ನಂಬುವ ವ್ಯಕ್ತಿ ಮೂರ್ಖನಾಗಿರಬೇಕು. ನಮ್ಮ ಅಸ್ಪೃಶ್ಯ ಸಹೋದರರನ್ನು ಒಂದು ಕ್ಷಣ ವ್ಯರ್ಥಮಾಡದೆ ತಮ್ಮ ಹಕ್ಕುಗಳನ್ನು ಭದ್ರಪಡಿಸಿಕೊಳ್ಳಲು ಕೆಲಸ ಮಾಡಲು ಪ್ರಾರಂಭಿಸಬೇಕು ಅಲ್ಲದೆ ಎದುರಾಳಿಗಳನ್ನು ಎದುರುಗೊಳ್ಳಲು ತಮ್ಮನ್ನು ತಾವು ಸಧೃಡಗೊಳಿಸಿಕೊಳ್ಳಬೇಕು** ಎಂದರು.

ಅಂಬೇಡ್ಕರ್ ಅವರು ವಿದೇಶಿ ಖ್ಯಾತಿಯ ವಿಶ್ವವಿದ್ಯಾನಿಲಯಗಳಲ್ಲಿನ ಉನ್ನತ ಶಿಕ್ಷಣವು ವೈಯಕ್ತಿಕ ಲಾಭಕ್ಕಾಗಿ ಅಥವಾ ಶ್ರೇಷ್ಠ ಸ್ಥಾನವನ್ನು ಪಡೆದುಕೊಳ್ಳುವುದ್ದಾಗಿ ಅಲ್ಲ. ಅದು ಭಾರತದ ಜನಸಂಖ್ಯೆಯ ಮೂರನೇ ಒಂದು ಭಾಗವನ್ನು ರೂಪಿಸುವ ಅಸ್ಪೃಶ್ಯರ ಮತ್ತು ಬಹಿಷ್ಕಾರದ ಭವಿಷ್ಯವು ಅವರ ಮುಖ್ಯ ಕಾಳಜಿಯಾಗಿತ್ತು. ಅವರು ಘನತೆಯಿಂದ ಬದುಕುವ ಹಕ್ಕನ್ನು ಪಡೆಯುತ್ತಾರೆಯೇ? ಬಹಿಷ್ಕಾರಕ್ಕೊಳಗಾದವರನ್ನು ಎಲ್ಲಾ ಭಾರತೀಯರು ತಮ್ಮ ಸಮಾನರೆಂದು ಪರಿಗಣಿಸುತ್ತಾರೆಯೇ? ಬಹಿಷ್ಕಾರಕ್ಕೊಳಗಾದವರು ತಮ್ಮ ಹಕ್ಕುಗಳನ್ನು ಪಡೆಯಲು ಏನು ಮಾಡಬೇಕು? ಈ ಪ್ರಶ್ನೆಗಳು ಬಹಿಷಾರಕ್ಕೊಳಗಾದವರ ವ್ಯಾಪಕ ಹಿತಾಸಕ್ತಿಗಳಿಗಾಗಿ ಹೋರಾಡಲು ಸಂಘಟನೆಯ ಸ್ಥಾಪನೆಗೆ ಕಾರಣವಾಯಿತು. ಬಹಿಷ್ಕೃತ ಹಿತಕಾರಿಣಿ ಸಭೆಯು 1924ನೇ ಜುಲೈ 20 ರಂದು ಅಂಬೇಡ್ಕರ್ ಅವರು ಕಾರ್ಯಕಾರಿಣಿ ಸಮಿತಿಯ ಅಧ್ಯಕ್ಷರಾಗಿದ್ದರು. ಈ ಸಂಘಟನೆ ಮತ್ತು ಪತ್ರಿಕೆಯ ಮೂಲಕ ಅಸ್ಪೃಶ್ಯರ ವಿಮೋಚನೆಯ ಉದ್ದೇಶವನ್ನು ಸಾಧಿಸಲು ಬಯಸಿದ್ದರು.

1927ನೇ ಡಿಸೆಂಬರ್ 25 ರಂದು ಅಂಬೇಡ್ಕರ್ ಜೀವನದಲ್ಲಿ ಮಹತ್ವದ ತಿರುವು ತಂದಿತು. 1818ನೇ ಜನವರಿ 1 ರಂದು ಭೀಮಾ–ಕೊರೆಗಾಂವ್ ಯುದ್ಧದಲ್ಲಿ ವಿಜಯ ಸಾಧಿಸಿದ ಮಹರ್ ಸೈನಿಕರಿಗೆ ಗೌರವ, ಮಹಾಡ್ ಸತ್ಯಾಗ್ರಹ, ಮನುಸ್ಮೃತಿಯನ್ನು ಸುಟ್ಟುಹಾಕಿದ್ದು, ಹಾಗೆಯೇ, ಮುಂಬಾಯಿ ವಿಧಾನ ಪರಿಷತ್ತಿಗೆ ಬ್ರಿಟಿಷ್ ಸರ್ಕಾರದಿಂದ ನಾಮನಿರ್ದೇಶಿತ ಸದಸ್ಯರಾಗಿ ನೇಮಕಗೊಂಡಿದ್ದು ಇದೇ ವರ್ಷದಲ್ಲಿ. ಅಂಬೇಡ್ಕರ್ ಅವರು ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ ಮತ್ತು ರಾಜಕೀಯ ತಾರತಮ್ಯದ ವಿರುದ್ಧ ನಿರ್ಣಾಯಕ ಯುದ್ಧವನ್ನು ಪ್ರಾರಂಭಿಸಿದ ವರ್ಷವಿದು. ಪತ್ರಿಕೆಗಳು ಮತ್ತು ನಿಯತಕಾಲಿಕೆಗಳು ಅವರ ಮೇಲೆ ಆಧಾರರಹಿತ ಆರೋಪವನ್ನು ಎಸೆದವು. ಸತ್ಯ ಮತ್ತು ತರ್ಕವನ್ನು ಬಳಸಿಕೊಂಡು ತನ್ನ ವಿಮರ್ಶಕರ ವಾದಗಳನ್ನು ಖಂಡಿಸುವ ಪತ್ರಿಕೆಯ ಅವಶ್ಯಕತೆಯಿದೆ ಎಂದು ಭಾವಿಸಿದ್ದರು. ಈ ಅಗತ್ಯವನ್ನು ಪೂರೈಸುವ ಸಲುವಾಗಿ 1927ನೇ ಏಪ್ರಿಲ್ 3 ರಂದು ಅವರು ಬಹಿಷ್ಕೃತ ಭಾರತ ಎಂಬ ಹೆಸರಿನ ಮರಾಠಿ ಪತ್ರಿಕೆಯನ್ನು ಪ್ರಾರಂಭಿಸಿದರು.

ಸಾಮಾಜಿಕ ಸುಧಾರಣೆಗಾಗಿ 1928ರಲ್ಲಿ ಅಂಬೇಡ್ಕರ್ ಅವರು ಹೊರತಂದಿರುವಂಥ ಸಮತಾ ಪತ್ರಿಕೆಯು ಮುಖವಾಣಿಯಾಗಿದ್ದರೆ, ಅದರ ಅನಂತರ ಹೊರತಂದಂಥ **ಜನತಾ** ಪತ್ರಿಕೆಯೂ ಸರಿಸುಮಾರು 26 ವರ್ಷಗಳ ಕಾಲ ಆ ಕೆಲಸವನ್ನು ಮುಂದುವರಿಸಿತು. 1956ರಲ್ಲಿ ಅದಕ್ಕೆ **"ಪ್ರಬುದ್ಧ ಭಾರತ"**ವೆಂದು ಮರುನಾಮಕರಣ ಮಾಡಲಾಯಿತು. ಇದಕ್ಕೆ ಅಂಬೇಡ್ಕರ್ ಅವರು ಬೌದ್ಧಧರ್ಮವನ್ನು ಸ್ವೀಕರಿಸುವ ಹಿನ್ನೆಲೆಯೂ ಇತ್ತು. ಅಂಬೇಡ್ಕರ್ ಅವರ ನಿಧನದ ಅನಂತರ ಪುತ್ರ ಯಶವಂತ ಅಂಬೇಡ್ಕರ್ ಅವರ ನೇತೃತ್ವದಲ್ಲಿ ಅದು ನಾಲ್ಕು ವರ್ಷ ನಡೆಯಿತು. ಮುಂಬಾಯಿಯಲ್ಲಿನ ಅಂಬೇಡ್ಕರ್ ಅನುಯಾಯಿಗಳು ಮತ್ತು ಕೆಲವು ಸಮಾನ ಮನಸ್ಕರು ಒಟ್ಟಾಗಿ 2017ರಲ್ಲಿ **ಪ್ರಬುದ್ಧ ಭಾರತ**ವನ್ನು ಮತ್ತೇ ಆರಂಭಿಸಿರುವುದೂ ಕೂಡ ಉಲ್ಲೇಖನೀಯ.

ಜನಜಾಗೃತಿಯೇ ಅಂಬೇಡ್ಕರ್ ಅವರ ಪತ್ರಿಕಾ ವೃತ್ತಿಯ ಮೂಲ ಆಶಯವಾಗಿದ್ದರಿಂದ ಅವರ ಯಾವ ಪತ್ರಿಕೆಗಳಿಗೂ ವಾಣಿಜ್ಯಕ ಉದ್ದೇಶ ಇರಲಿಲ್ಲ. ಸಹಜವಾಗಿಯೇ ಅವು ಆರ್ಥಿಕ ಮುಗ್ಗಟ್ಟು ಎದುರಿಸಬೇಕಾಯಿತು. ಆದರೆ ಸುಮಾರು ಮೂರುವರೆ ದಶಕಗಳ ಕಾಲ ಪ್ರತ್ಯೇಕ್ಷವಾಗಿ ಪತ್ರಿಕಾ ಕೃಷಿಯಲ್ಲಿ ತೊಡಗಿಕೊಂಡಿದ್ದ ಅಂಬೇಡ್ಕರ್ ಅವರಿಗೆ ಸಾಮಾಜಿಕ ನ್ಯಾಯದ ಕೀಲಿಕೈಗಳಾಗಿ ಪತ್ರಿಕೆಗಳ ಬಗೆಗೆ ಅಪಾರ ವಿಶ್ವಾಸ ಇತ್ತು. ಶೋಷಿತರನ್ನು ಶಿಕ್ಷಿತರನ್ನಾಗಿಸದೆ ಯಾವ ಹೋರಾಟವೂ ಸಾಧ್ಯವಿಲ್ಲ, ಈ ಪ್ರಕ್ರಿಯೆಯಲ್ಲಿ ಪತ್ರಿಕಾ ಮಾಧ್ಯಮ ಒಂದು ಅವಿಭಾಜ್ಯ ಅಂಗ ಎಂದು ಅವರು ನಂಬಿದ್ದರು.

ಅಂಬೇಡ್ಕರ್ ಅವರು ಪತ್ರಿಕಾ ವೃತ್ತಿಯ ಬಗೆಗೆ ಹೊಂದಿದ್ದ ಕೆಲವು ಪ್ರಮುಖ ನಿಲುವುಗಳನ್ನು ಇತಿಹಾಸಕಾರರು ಹೀಗೆ ಗುರುತಿಸಿದ್ದಾರೆ: ಪತ್ರಿಕಾ ವೃತಿಯು ನ್ಯಾಯೋಚಿತ ಹಾಗೂ ಪೂರ್ವಗ್ರಹ ರಹಿತವಾಗಿರಬೇಕು; ಪತ್ರಿಕಾ ವೃತ್ತಿ ಹಾಗೂ ಪತ್ರಕರ್ತರು ನೈತಿಕ ಮೌಲ್ಯಗಳನ್ನು ಹೊಂದಿರಬೇಕು; ನಿರ್ಭಯವು ಪತ್ರಿಕಾವೃತಿ ಹಾಗೂ ಪತ್ರಕರ್ತರ ಪ್ರಧಾನ ಲಕ್ಷಣವಾಗಿರಬೇಕು; ಸಮಾಜ ಹಿತದ ಪರವಾಗಿರುವುದು ಪತ್ರಿಕಾ ವೃತಿಯ ಪ್ರಾಥಮಿಕ ಕರ್ತವ್ಯ; ವ್ಯಕ್ತಿಪೂಜೆಗೆ ಅವಕಾಶ ಇರಬಾರದು; ವಸ್ತುನಿಷ್ಠತೆಯೇ ಪತ್ರಿಕೆಗಳ ಆದರ್ಶವಾಗಿರಬೇಕು ಅತಿರಂಜಕತೆಯಲ್ಲ. ನಮ್ಮ ಮಾಧ್ಯಮ ರಂಗವನ್ನು ಕಟ್ಟಿ ಬೆಳೆಸಿದ ಹಿರಿಯರು ಈ ಕ್ಷೇತ್ರದ ಬಗೆಗೆ ಏನೆಲ್ಲಾ ಆದರ್ಶಗಳನ್ನು ಇಟ್ಟುಕೊಂಡಿದ್ದರೋ ಅವುಗಳ ಸಾರಸರ್ವಸ್ವ ಅಂಬೇಡ್ಕರ್ ಅವರ ಚಿಂತನೆಯಲ್ಲಿದೆ. ಮುಕ್ಕಾಲು ಶತಮಾನದ ಅನಂತರ ಭಾರತೀಯ ಮಾಧ್ಯಮರಂಗ ಸಾಗಿ ಬಂದಿರುವ ದಾರಿ ನೋಡಿದರೆ, ನಾವೊಂದು ಬೇರೆಯದೇ ಲೋಕದಲ್ಲಿ ಇರುವುದು ಎಲ್ಲರಿಗೂ ಗೊತ್ತಾಗುತ್ತದೆ. ಪೂರ್ವಗ್ರಹ, ವ್ಯಕ್ತಿಪೂಜೆ, ಕಪೋಕಲ್ಪಿತ ಸುದ್ದಿಗಳು, ಅತಿರಂಜಕತೆ, ಬಂಡವಾಳ ಶೇಖರಣೆಯ ವ್ಯಾಪಾರಿ ಮನೋಭಾವ– ಇಂದು ಬಹುಪಾಲು ಮಾಧ್ಯಮ ರಂಗದಲ್ಲಿ ಏನೆಲ್ಲಾ ಕಾಣುತ್ತಿದ್ದೇವೆಯೋ ಅವೆಲ್ಲಾ ಅಂಬೇಡ್ಕರ್ ಅವರು ಹೊಂದಿದ್ದಂಥ ಆಶಯಗಳಿಗೆ ಸಂಪೂರ್ಣವಾಗಿ ವಿರುದ್ಧ

ದಿಕ್ಕಿನಲ್ಲಿದೆ. ಸ್ವತಃ ಅರ್ಥಶಾಸ್ತ್ರದ ಬಹುದೊಡ್ಡ ವಿದ್ವಾಂಸರಾಗಿದ್ದ ಅಂಬೇಡ್ಕರ್ ಅವರೂ ಮಾಧ್ಯಮಗಳಿಗೆ ಸೂಕ್ತವಾದ ಒಂದು **ಕಂದಾಯ ಮಾದರಿಯ** (ಟಿಆರ್‌ಪಿ) ಬಗೆಗೆ ಅಷ್ಟಾಗಿ ತಲೆಕೆಡಿಸಿಕೊಳ್ಳಲಿಲ್ಲ. ಆದರೆ, ಅಂಬೇಡ್ಕರ್ ಅವರ ಕಾಲಕ್ಕೆ ಪತ್ರಿಕೆಗಳ ಉದ್ದೇಶವು ಮಾಹಿತಿ ಪ್ರಸಾರ, ಶಿಕ್ಷಣ ಹಾಗೂ ಜಾಗೃತಿಗಿಂತ ಆಚೆ ಬೇರೆ ಏನೂ ಇಲ್ಲದ್ದೇ ಇದ್ದದು ಇದಕ್ಕೆ ಪ್ರಮುಖ ಕಾರಣವಿರಬಹುದು. ಅಂಬೇಡ್ಕರ್ ಅವರು ತಮ್ಮ ಬದುಕಿನಲ್ಲಿ ಹೀಗೆ, ಮೂಕನಾಯಕ, ಬಹಿಷ್ಕೃತ್ ಭಾರತ್, ಸಮತಾ, ಜನತಾ ಮತ್ತು ಪ್ರಭುದ್ಧ ಭಾರತ್ ಎಂಬಂಥ ಐದು ಪತ್ರಿಕೆಗಳನ್ನು ಹೊರತಂದು ಆ ಮುಖೇನ ಅವರು ಒಬ್ಬ ನೈಜಾ ಪತ್ರಕರ್ತರೇ ಆಗಿದ್ದರೇ ಹೊರತು ಪತ್ರಿಕೋದ್ಯಮಿ ಆಗಿರಲಿಲ್ಲ. ಸಮಕಾಲೀನ ಸಂದರ್ಭದಲ್ಲಿ ಅಂಬೇಡ್ಕರ್ ಮತ್ತು ಅವರು ಹೊರತಂದಿರುವ ಪತ್ರಿಕೆಗಳ ಪ್ರಸ್ತುತತೆಯೂ ಹೆಚ್ಚೆಚ್ಚು ಮಾದರಿಯಾಗಬೇಕು.

**ಪರಾಮರ್ಶನ ಗ್ರಂಥಗಳು**

1. ಡಾ.ಬಾಬಾಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಬರಹಗಳು ಮತ್ತು ಭಾಷಣಗಳು, ಸಂಪುಟ– 16 ರಿಂದ 22ರವರೆಗೆ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಮತ್ತು ಕುವೆಂಪು ಭಾಷಾ ಭಾರತಿ ಪ್ರಾಧಿಕಾರ–ಬೆಂಗಳೂರು, 2015
2. ಡಾ.ಮ.ನ.ಜವರಯ್ಯ, ಅಂಬೇಡ್ಕರ್ ಮತ್ತು ಸಾಮಾಜಿಕ ನ್ಯಾಯ, ಸಿದ್ಧಾರ್ಥ ಗ್ರಂಥಮಾಲೆ, ಮೈಸೂರು, 1995
3. ಡಾ.ಮ.ನ.ಜವರಯ್ಯ, ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅಂಬೇಡ್ಕರ್, ಸಿದ್ಧಾರ್ಥ ಗ್ರಂಥಮಾಲೆ, ಮೈಸೂರು, 2001
4. ದತ್ತಾತ್ರೇಯ ಇಕ್ಕಳಕಿ, (ಸಂ), ಅಂಬೇಡ್ಕರ್ ಚಿಂತನೆ, ಸುಮೇಧ ಪ್ರಕಾಶನ, ಗುಲಾಬರ್ಗಾ, 2005
5. ಡಾ.ಅಮ್ಮಸಂದ್ರ ಸುರೇಶ್, ಅಂಬೇಡ್ಕರ್ ಮತ್ತು ಪತ್ರಿಕೋದ್ಯಮ, ಅಮ್ಮ, ಪ್ರಕಾಶನ, ಮೈಸೂರು, 2020